ಕರ್ನಾಟಕ ವಿಧಾನಸಭೆ

ಗುರುವಾರ 13ನೇ ಜುಲೈ 2006 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 31 ನಿಮಿಷಕ್ಕೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣರವರು)

ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ : ಬೆಂಗಳೂರಿನಲ್ಲಿ ಬಾಂಬ್ ಬ್ಲಾಸ್ಟ್ ಆಗುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವ ಬಗ್ಗೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಇವತ್ತು ಪತ್ರಿಕೆಯಲ್ಲಿ ಒಂದು ಸುದ್ದಿ ಇದೆ, ಮೊನ್ನೆ ಬಾಂಬೆಯಲ್ಲಿ ನಡೆದ ಬಾಂಬ್ ಬ್ಲಾಸ್ಟ್ ಏನಿದೆ, ಅವರು ಬೆಂಗಳೂರು ಕಡೆ ಹೆಜ್ಜೆ ಹಾಕುತ್ತಿದ್ದಾರೆ ಎನ್ನತಕ್ಕಂಥ ಸೂಚನೆ ಇದೆ ಎಂದು ಹೇಳಿ ಹಿಂದೂ ಮತ್ತು ಕನ್ನಡ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಆದರೆ ಬಾಂಬೆಯಲ್ಲಿ ನಡೆದಂಥ ಬಾಂಬ್ ಬ್ಲಾಸ್ಟ್ ಮಾಡಿದಂಥ ಉಗ್ರಗಾಮಿಗಳು ಹೈದ್ರಾಬಾದ್ ಮುಖಾಂತರ ಬೆಂಗಳೂರಿಗೆ ನುಸುಳತಕ್ಕಂಥ ಸಾಧ್ಯವಿದೆ ಎಂದು ಹೇಳತಕ್ಕಂಥದ್ದನ್ನು ಕೇಂದ್ರ ಗೃಹಖಾತೆ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಮಾಹಿತಿ ಕೊಟ್ಟಿದ್ದಾರೆಂದು ಹೇಳತಕ್ಕಂಥ ಸುದ್ದಿ ಪತ್ರಿಕೆಯಲ್ಲಿದೆ. ಇದು ಬಹಳ ಗಂಭೀರವಾದಂಥ ವಿಚಾರ. ಏಕೆಂದರೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಆದಂಥ ಘಟನೆಗಿಂತ ಮೊದಲು ಕೇಂದ್ರ ಸರ್ಕಾರ ಗೃಹ ಇಲಾಖೆಯಿಂದ ಇಲ್ಲಿಗೆ ಸೂಚನೆಯನ್ನು ಕಳುಹಿಸಿತ್ತು. ಈ ತರಹದ ಅವಕಾಶಗಳು ಇದೆ. ಎಚ್ಚರಿಕೆಯಿಂದ ಇರಬೇಕು ಎಂದು ಹೇಳಿ, ಆದರೆ ನಮ್ಮ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್ ಎಚ್ಚರಿಕೆಯಿಂದ ಇಲ್ಲದೇ ಇರುವುದರಿಂದ ದೇಶದ ಇಬ್ಬರು ಪ್ರಮುಖ ವಿಜ್ಞಾನಿಗಳು ಪ್ರಾಣ ಕೊಡಬೇಕಾದ ಪರಿಸ್ಥಿತಿ ಬಂತು. ಈಗ ಬಾಂಬೆಯಲ್ಲಿ ನಡೆದಂಥ ಘಟನೆಯ ಹಿನ್ನಲೆಯಲ್ಲಿ ಮತ್ತು ಕೇಂದ್ರ ಸರ್ಕಾರದ ಗೃಹ ಸಚಿವಾಲಯ ಈ ರಾಜ್ಯ ಸರ್ಕಾರಕ್ಕೆ ನಿನ್ನೆ ಅವರು ಸೂಚನೆಯನ್ನು ಕೊಟ್ಟಿದ್ದಾರೆ. ಹೈದ್ರಾಬಾದ್ ಮುಖಾಂತರ ಉಗ್ರ ಗಾಮಿಗಳು ಬೆಂಗಳೂರು ಕಡೆ ಬರತಕ್ಕಂಥ ಅವಕಾಶಗಳು ಇವೆ. ಈ ಕಡೆ ಬರಲು ಪ್ರಾರಂಭ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಸೂಚನೆ ಕೊಟ್ಟಿದ್ದಾರೆ. ಅದಕ್ಕೆ ಸಬ್‌ಸ್ಟ್ಯಾನ್ಸಿಯೇಟಾಗಿ (ಅದಕ್ಕೆ ಪುರಾವೆಯಾಗಿ)

ಹೈದ್ರಾಬಾದ್‌ಗೂ ಬಾಂಬೆಯಲ್ಲಿ ನಡೆದ ಬಾಂಬ್ ಬ್ಲಾಸ್ಟ್‌ಗೂ ಲಿಂಕ್ ಇದೆ, ಹೈದ್ರಾಬಾದ್‌ನವರು ಅಲ್ಲಿ ಬಾಂಬ್ ಬ್ಲಾಸ್ಟ್‌ಗೆ ಮುಖ್ಯ ಕಾರಣ ಎಂದು ಅಲ್ಲಿ ಆಂಧ್ರ ಸರ್ಕಾರ ಒಂದು ಎಚ್ಚರಿಕೆಯನ್ನು ಕೊಟ್ಟಿದೆ. ಹಾಗಾಗಿ ಇವತ್ತು ಕರ್ನಾಟಕ ರಾಜ್ಯಕ್ಕೆ ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಮುಖ್ಯವಾದ ವಿಚಾರ.

ಉಪಾಧ್ಯಕ್ಷರು : ಆದರೆ ಇದನ್ನು ಆಮೇಲೆ ಚರ್ಚೆ ಮಾಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಚರ್ಚೆ ಮಾಡಿ ಇದಕ್ಕೆ ಉತ್ತರ ಕೊಡಬೇಕು, ಇದು ಬಹಳ ಮುಖ್ಯವಾದಂಥ ವಿಚಾರ. ಇದೊಂದು ಗಂಭೀರವಾದಂಥ ವಿಚಾರ.

ಉಪಾಧ್ಯಕ್ಷರು : ಮಾನ್ಯ ಹೋಮ್ ಮಿನಿಸ್ಟರ್ ಬರಲಿ. ನೀವು ಒಂದು ನೋಟೀಸ್ ಕೊಡಿ ರೈಟಿಂಗ್‌ನಲ್ಲಿ ನೀವು ಕಳುಹಿಸಿ, ಅವರು ಬಂದ ಮೇಲೆ ಅದನ್ನು ಮಾಮೂಲಿಯಾಗಿ ಪ್ರಶ್ನೆಯಾಗಿ ನೀವು ತೆಗೆದುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಹೇಳಿಕೆಯನ್ನು ಕೊಡಬೇಕಲ್ಲವೆ?

ಉಪಾಧ್ಯಕ್ಷರು : ಅವರು ಬರಲಿ ಅವರು ಬಂದ ಕೂಡಲೇ ಅದನ್ನು ಮಾಡೋಣ. ಹೋಮ್ ಮಿನಿಸ್ಟರ್ ಬಂದ ಕೂಡಲೆ ಹೇಳಿ ನೀವು. ಅವರು ಇಲ್ಲದಿರುವಾಗ ಹೇಳಿಕೊಂಡರೆ ಏನು ಪ್ರಯೋಜನವಾಗುತ್ತದೆ. ಅವರು ಈಗ ಬರುತ್ತಾರೆ, ಈಗ ಪ್ರಶ್ನೋತ್ತರ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸ್ಪೀಕರ್‌ರವರ ಕೊಠಡಿಯಲ್ಲಿ ನಾವು ಮಾಧುಸ್ವಾಮಿಯವರು ಮತ್ತು ಶ್ರೀರಾಮರೆಡ್ಡಿಯವರು ಎಲ್ಲರೂ ಮಾತನಾಡಿದ್ದೇವೆ. ಇದನ್ನು ಒಂದು ಗಂಟೆಯೊಳಗಾಗಿ ಮುಗಿಸಬೇಕು.

ಉಪಾಧ್ಯಕ್ಷರು : ನಿಯಮ-69, ಹಾಗಾದರೆ ಇದರ ಬಗ್ಗೆ ಶುರು ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಯಮ-69ರ ಮೇಲೆ ಮಾತನಾಡಬೇಕು, ಇಲ್ಲಿ ಮುಂದಿನ ಬೆಂಚಿನಲ್ಲಿ ಯಾರು ಇಲ್ಲವಲ್ಲಾ?

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಉಪಾಧ್ಯಕ್ಷರೆ, ಮೊದಲು ಪ್ರಶ್ನೋತ್ತರ ಆಗಲಿ ನಂತರ ಇದರ ಬಗ್ಗೆ ಚರ್ಚೆಯಾಗಬಹುದು.

ಉಪಾಧ್ಯಕ್ಷರು : ಒಂದು ಗಂಟೆಯೊಳಗೆ ಮುಗಿಸುತ್ತಾರೆ. ನಿಯಮ-69 ಮುಗಿದು ಹೋಗಲಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮೊದಲು ಪ್ರಶ್ನೋತ್ತರ ಮುಗಿಸಲಿ.

ಉಪಾಧ್ಯಕ್ಷರು : ಪಾಟೀಲರೆ, ಒಂದು ಗಂಟೆಯೊಳಗೆ ಈ ನಿಯಮ-69 ಮುಗಿಯುತ್ತದೆ. ಇದು ಆದ ನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಒಂದು ಗಂಟೆಗೆ ತೆಗೆದುಕೊಳ್ಳೋಣ.

ಶ್ರೀ ಶಿವಾನಂದ ಎಸ್. ಪಾಟೀಲ್ : ತೆಗೆದುಕೊಳ್ಳುತ್ತೇವೆ ಎನ್ನುವ ಅಶ್ಯೂರೆನ್ಸ್ ಆದರೂ ಕೊಡಿ. ನಿನ್ನೆ ಲ್ಯಾಪ್ಸ್ ಆಯಿತು, ಮೊನ್ನೆ ಲ್ಯಾಪ್ಸ್ ಆಯಿತು, ಇವತ್ತಾದರೂ ತೆಗೆದು ಕೊಳ್ಳುತ್ತೇವೆನ್ನುವ ಅಶ್ಯೂರೆನ್ಸಾದರೂ ಕೊಡಬೇಕಲ್ಲವೆ?

ಉಪಾಧ್ಯಕ್ಷರು : ಇವತ್ತು ಇದೆ ತೆಗೆದುಕೊಂಡೇ ತೆಗೆದುಕೊಳ್ಳುತ್ತೇವೆ.

2. ಚರ್ಚೆ (ಮುಂದುವರಿಸಲಾಗಿದೆ)

ವಿಷಯ : ಬಳ್ಳಾರಿ ಜಿಲ್ಲೆಯಲ್ಲಿನ ಗಣಿ ಮಾಲೀಕರಿಂದ 150 ಕೋಟಿ ಸಂಗ್ರಹಿಸಲಾಗಿದೆ ಎನ್ನಲಾದ ವಿಷಯದ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಕಳೆದ 5-6 ದಿವಸಗಳಿಂದ ಕರ್ನಾಟಕ ರಾಜ್ಯದಲ್ಲಿ ಒಂದು ರಾಜಕೀಯ ಬಿರುಗಾಳಿ ಎದ್ದಿದೆ. ಈ ಬಿರುಗಾಳಿಯನ್ನು ಎಬ್ಬಿಸಿರತಕ್ಕಂಥದ್ದು ವಿರೋಧ ಪಕ್ಷದವರಲ್ಲ. ಈ ಬಿರುಗಾಳಿಯನ್ನು ಎಬ್ಬಿಸಿರತಕ್ಕಂಥ ಆಡಳಿತ ಪಕ್ಷದ ಆಡಳಿತವನ್ನು ನಡೆಸತಕ್ಕಂಥ ಸರ್ಕಾರದಲ್ಲಿ ಒಂದು ಭಾಗವಾಗಿರತಕ್ಕಂಥ ಒಂದು ಪ್ರಮುಖ ಪಕ್ಷ ಒಂದು ಬಿರುಗಾಳಿಯನ್ನು ಎಬ್ಬಿಸಿದೆ. ಈ ಬಿರುಗಾಳಿ ಯಾವರೀತಿ ಸೃಷ್ಟಿಯಾಗಿದೆ ಎಂದರೆ ಒಬ್ಬ ಎಸ್ಪಿಯ ವರ್ಗಾವಣೆ ಮತ್ತು 150 ಕೋಟಿ ರೂ.ಗಳ ಮಧ್ಯೆ ಈ ಬಿರುಗಾಳಿ ಸೃಷ್ಟಿಯಾಗಿದೆ. ಆದರೆ ಇದರ ವಾಸ್ತವ ಬಿರುಗಾಳಿ ಎಲ್ಲಿ ಸೃಷ್ಟಿಯಾಗಿದ್ದು ಎಂದರೆ ಎಸ್.ಪಿ.ಯ ವರ್ಗಾವಣೆಯ ಪ್ರಶ್ನೆಯೂ ಅಲ್ಲ, 150 ಕೋಟಿ ರೂ.ಗಳ ಪ್ರಶ್ನೆಯೂ ಅಲ್ಲ, ಇದು ಮೈತ್ರಿ ಸರ್ಕಾರವನ್ನು ನಡೆಸತಕ್ಕಂಥ ಎರಡು ರಾಜಕೀಯ ಪಕ್ಷಗಳ ಮಧ್ಯೆ ಉಂಟಾಗಿರತಕ್ಕಂಥ ರಾಜಕೀಯ ಬಿಕ್ಕಟ್ಟು ಮತ್ತು ಪರಿಣಾಮ. ಇದು ಇದು ನಂಬರ ಒನ್. ನಂಬರ್-2, ಯಾವ ಪಕ್ಷ ಬಿರುಗಾಳಿ ಎಬ್ಬಿಸಿದೆಯೋ 150 ಕೋಟಿ ರೂ.ಗಳನ್ನು ಯಾರೋ ವಸೂಲಿ ಮಾಡುತ್ತಿದ್ದಾರೆ ಎಂದು ಹೇಳಿ, ಆ ಪಕ್ಷದಲ್ಲಿಯೇ ಇರತಕ್ಕಂಥ ಆಂತರಿಕ ಭಿನ್ನಾಭಿಪ್ರಾಯ ಇದು. ಈ ಎರಡು ಕಾರಣಗಳಿಂದ ಇವತ್ತು ಇಡೀ ದೇಶದಲ್ಲಿ ರಾಜಕಾರಣಿಗಳನ್ನು ಎಷ್ಟು ಹೀನವಾಗಿ ಜನ ನೋಡಲಿಕ್ಕೆ ಪ್ರಾರಂಭ ಮಾಡಿದ್ದಾರೆಂದರೆ ರಾಜಕಾರಣಿಗಳು ಎಂದರೆ ದುಡ್ಡು ಹೊಡೆಯಲಿಕ್ಕೆ ಇರತಕ್ಕಂಥವರು, ರಾಜಕೀಯ ಪಕ್ಷಗಳು ಎಂದರೆ ದುಡ್ಡು ವಸೂಲಿ ಮಾಡಲಿಕ್ಕೆ ಇರತಕ್ಕಂಥವರು ಅಂತ ಹೇಳಿ ಮೂರು ಕಾಸಿನ ಮರ್ಯಾದೆ ಇಲ್ಲದಿರತಕ್ಕಂಥ ಸ್ಥಿತಿಯಲ್ಲಿ ಇವತ್ತು ರಾಜಕೀಯ ಪರಿಸ್ಥಿತಿಯನ್ನು